ಮನೆಯ ಬಳಿಗೆ ಬಂದುದು ಮಾತ್ರವಲ್ಲ ಮರದ ಪರಿಶೀಲನೆ ಮಾಡಿ ಅದನ್ನು ಕಡಿಯಬಹುದೆಂದು ಒಪ್ಪಿಗೆ ಪತ್ರಕ್ಕೆ ಸಹಿ ಮಾಡಿ ಕೊಟ್ಟರು. ತಮ್ಮ ಆಫೀಸಿನಿಂದ ಫಾರೆಸ್ಟ್ ಗಾರ್ಡ್, ಸಮಿತಿಯ ಸದಸ್ಯರು, ಅಧ್ಯಕ್ಷರು, ಕಾರ್ಯದರ್ಶಿ, ಮಣೆಗಾರರು ಹಾಗೂ ಅರ್ಜಿದಾರರು ಉಪಸ್ಥಿತರಿದ್ದು ಎಲ್ಲರ ಸಮಕ್ಷಮದಲ್ಲಿ ಮರಕಡಿಯಬಹುದೆಂದು ಅದರಲ್ಲಿ ಆರ್ಡರು ಮಾಡಿದ್ದರು. ಪತ್ರವನ್ನು ಪಂಚಾಯತ್‌ಗೆ ಉದ್ದೇಶಿಸಿ ಬರೆದಿದ್ದರೂ ಅದನ್ನು ಮೂಸಬ್ಬನ ಕೈಯಲ್ಲೇ ಕೊಟ್ಟು ತಲಪಿಸಲು ಹೇಳಿದರು. ದೇಶ ಗೆದ್ದ ಮನೋಭಾವದಲ್ಲಿ ಮೂಸಬ್ಬ ಆ ಪತ್ರದೊಂದಿಗೆ ಊರಿಗೆ ಮರಳಿ ಬಂದು ಪಂಚಾಯತ್ ಆಫೀಸಿಗೆ ಆ ಪತ್ರವನ್ನು ಮುಟ್ಟಿಸಿದ.

ಮರವನ್ನು ಪಂಚಾಯತ್‌ನವರು ಬೇಗ ಕಡಿಯಬಹುದೆಂದು ಮೂಸಬ್ಬ ನಿರೀಕ್ಷಿಸಿದ್ದ. ಆದರೆ ಈ ನಡುವೆ ಇನ್ನೊಂದು ಸಮಸ್ಯೆ ಹುಟ್ಟಿತು. ಆ ಅಶ್ವತ್ಥ ಮರದ ಸುತ್ತ ಕಲ್ಲೆಲ್ಲ ಜರಿದ ಒಂದು ಕಟ್ಟೆಯಿತ್ತು. ಸುಮಾರು ಎರಡಡಿ ಎತ್ತರದ ಕಟ್ಟೆ. ಮುರಕಲ್ಲಿನದ್ದು. ಮರದ ಬುಡ ಅಗಲವಾಗಿದ್ದು ಅನೇಕ ಬಿಳಲುಗಳಿಂದ ಆ ಕಲ್ಲಿನ ಕಟ್ಟೆ ಜರಿದು ಹೋಗಿತ್ತೋ ಏನೋ. ಅಲ್ಲಿ ಕೆಲವು ಪೊಟರೆಗಳೂ ಇದ್ದುವು. ಆ ಕಟ್ಟೆ ಸ್ಥಳೀಯ ದೇವಸ್ಥಾನಕ್ಕೆ ಸೇರಿದುದಾಗಿ ಯಾರೋ ಇನ್ನೊಂದು ಕ್ಯಾತೆ ತೆಗೆದರು. ಒಂದು ಮಾತು ಆ ದೇವಸ್ಥಾನದ ಮೊಕ್ತೇಸರರ ಬಳಿ ಕೇಳುವುದು ಒಳ್ಳೆಯದೆಂದು ಕ್ಯಾತೆ ತೆಗೆದವರು ಸಲಹೆ ನೀಡಿದರು. ಆದುದರಿಂದ ಸಮಿತಿಯ ಸದಸ್ಯರು ಮೊಕ್ತೇಸರರನ್ನು ಭೇಟಿ ಮಾಡಲು ಹೊರಟರು. ಅವರು ಮಾತನಾಡುವಾಗ ದೇವಸ್ಥಾನದ ಅರ್ಚಕರೂ ಬಳಿಯಲ್ಲಿದ್ದರು.

ಹಿಂದೆ ಊರ ಬೀದಿಯಲ್ಲಿ ದೇವರ ಮೆರವಣಿಗೆ ಮಾಡುವಾಗ ಆ ಕಟ್ಟೆಯ ಮೇಲೆ ಹತ್ತು ನಿಮಿಷ ಮೂರ್ತಿಯನ್ನು ಇಡುವ ಕ್ರಮವಿತ್ತೆಂದು ಅರ್ಚಕರೂ ಹೇಳಿದರು. ಹಾಗೆ ಇಟ್ಟಾಗ ಸುತ್ತುಮುತ್ತಿನವರು ಹಣ್ಣುಕಾಯಿ ಒಪ್ಪಿಸುತ್ತಿದ್ದರಂತೆ. ಆ ಮೇಲೆ ದೇವರ ಮೂರ್ತಿಯನ್ನು ಮೆರವಣಿಗೆಯಲ್ಲಿ ಮುಂದಕ್ಕೆ ಕೊಂಡೊಯ್ಯಲಾಗುತ್ತಿತ್ತು. ಅರ್ಚಕರು ಬಹಳ ಮುದುಕರು. ಆದುದರಿಂದ ಅವರ ಮಾತನ್ನು ಒಪ್ಪಲೇಬೇಕು. ಮೊಕ್ತೇಸರರು, 'ಅಶ್ವತ್ಥದ ಮರವಲ್ಲವೇ? ನಮಗೆ ಅದು ಪುಣ್ಯದ ಮರ. ಅದರಲ್ಲಿ ವಿಷ್ಣು ದೇವರು ವಾಸ ಮಾಡುತ್ತಾನೆ ಎಂದು ನಂಬಿಕೆಯಿದೆ. ಹಿರಿಯರು ಹೇಳಿದ್ದು. ನಾವು ನಂಬುತ್ತೇವೆ.' ಎಂದರು. ಅದಕ್ಕೆ ಅರ್ಚಕರು, 'ಬರೇ ವಿಷ್ಣು ದೇವರಲ್ಲ. ಅದರ ಬೇರಿನಲ್ಲಿ ಬ್ರಹ್ಮನೂ ಕಾಂಡದಲ್ಲಿ ಈಶ್ವರನೂ ಟೊಂಗೆಗಳಲ್ಲಿ ವಿಷ್ಣುವೂ ಇರುತ್ತಾನೆಂದು ತಿಳಿದವರು ಹೇಳುತ್ತಾರೆ. ಶನಿವಾರ ಅದಕ್ಕೆ ಸುತ್ತು ಹಾಕಿ ಏನಾದರೂ ಬೇಡಿಕೊಂಡರೆ ಅನುಗ್ರಹ ಸಿದ್ಧಿಯಾಗುತ್ತದಂತೆ. ಬಂಜೆ ಹೆಂಗಸರಿಗೆ ಮಕ್ಕಳಾಗುತ್ತಾವಂತೆ. ಗಂಡಸರಿಗೆ ಶನಿಕಾಟ ತಪ್ಪುತ್ತದಂತೆ' ಎಂದು ಮಾತು ಜೋಡಿಸಿದರು.

ಇದು ಒಳ್ಳೆಯ ಮಲಾಮತ್ತಾಯಿತಲ್ಲ ಎಂದು ಮೂಸಬ್ಬ ತಲೆ ಚಚ್ಚಿಕೊಂಡ. 'ಏನಾದರೂ ಮಾಡಲಿಕ್ಕೆ ಸಾಧ್ಯವೇ' ಎಂದು ವಿನಯದಿಂದ ಬೇಡಿಕೊಂಡ. ಮೊಕ್ತೇಸರರು ಅವನನ್ನು ಸಮಾಧಾನ ಮಾಡುತ್ತಾ, 'ಮುದಿಯಾದ ಮರ ಕಡಿಯಬೇಕೆನ್ನುವುದು ಸಾಧುವೇ. ಅದು ಉರುಳಿ ಬಿದ್ದು ಯಾರದ್ದಾದರೂ ಪ್ರಾಣಕ್ಕೆ ಅಪಾಯ ಬರಬಾರದಲ್ಲ? ಪಾಪ ಪರಿಹಾರಾರ್ಥ ಒಂದು ಪೂಜೆ ಮಾಡಿ ಅದನ್ನು ಕಡಿಯುವುದಕ್ಕೆ ಪ್ರಾರ್ಥನೆ ಮಾಡ ಬಹುದಲ್ಲ?' ಎಂದು ಅರ್ಚಕರ ಮುಖ ನೋಡಿದರು. ಅವರು, 'ಮಾಡಬಹುದೋ ಏನೋ?' ಎಂದು ತಲೆಯಲ್ಲಾಡಿಸಿದರು. ಹಾಗೆ ಅವರಿಂದ ಒಂದು 'ಶುಭ ಮುಹೂರ್ತ'ದ ದಿನವನ್ನು